**ಓಎಸ್ ನಂಃ 05/2023 ಪಿ.ಡಬ್ಲ್ಯೂ- 1**

**ದಿನಾಂಕಃ 20.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದಃ</u>

ದಾವಾ ಆಸ್ತಿ ಚಕ್ಕುಬಂದಿಯಲ್ಲಿ ನಿಮ್ಮ ತಾತ ಸೀತಪ್ಪ ರವರಿಗೆ ಮಂಜೂರಾಗಿರುವ ದಾಖಲಾತಿ ಇರುತ್ತದೆಯಾ ಎಂದರೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸೀತಪ್ಪ ರವರು ಬದುಕಿದ್ದಾಗ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ಸದರಿ ಸೀತಪ್ಪನಿಗೆ ಮಂಜೂರಾಗಿರುವ ಆಸ್ತಿ ಮಾತ್ರ ಇತ್ತು ಎನ್ನುತ್ತಾರೆ. ಸೀತಪ್ಪ ರವರು ಅವರು ಮಕ್ಕಳನ್ನು ಬಿಟ್ಟು ಬೇರೆ ಯಾರನ್ನಾದರೂ ದತ್ತು ತೆಗೆದುಕೊಂಡಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಸೀತಪ್ಪನಿಗೆ ಆಸ್ತಿ ಮಂಜೂರಾದಾಗ ಅವರು ಕುಟುಂಬದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿರುವ ಮಾವಿನ ಮರಗಳಿಗೆ ಎಷ್ಟು ಆಗಿರುತ್ತದೆ ಎಂರೆ 40 ವರ್ಷ ಎನ್ನುತ್ತಾರೆ. ಸದರಿ ಮಾವಿನ ಮರಗಳನ್ನು ನಾಟಿ ಮಾಡುವ ಕಾಲಕ್ಕೆ ನೀವು ನೋಡಿರುತ್ತೀರಾ ಎಂದರೆ ನಾನು ನೋಡಿರುತ್ತೆನೆ ಎನ್ನುತ್ತಾರೆ. ಸದರಿ ಮರಗಳನ್ನು ನಾನೇ ಹಾಕಿರುತ್ತೆನೆ ಎನ್ನುತ್ತಾರೆ. ನೀವು ಚಕ್ಕುಬಂದಿ ದಾವಾ ಆಸ್ತಿ ನೀವು ಮತ್ತು ನಿಮ್ಮ ಕುಟುಬಂದವರು ಬಂದಿರುವುದಿಲ್ಲ ಹಾಗೂ ಮರಗಳನ್ನು ನಾಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಚಕ್ಕುಬಂದಿಯಲ್ಲಿ ನೀವು ಸ್ವಾದಿನದಲ್ಲಿ ಬೇರೆ ಯಾರು ನೋಡಿರುತ್ತಾರಾ ಎಂದರೆ ನೋಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ 3 ಮತ್ತು 4 ನೇ ಪ್ರತಿವಾದಿ ಅವರ ಮುತ್ತಾತನ ಕಾಲದಿಂದ ಸ್ವಾದಿನದಲ್ಲಿ ಇರುತ್ತಾರೆ ಎಂದರೆ ಸುಳ್ಳು ಎನ್ನುತ್ತಾರೆ. ಸದರಿ ಪ್ರತಿವಾದಿ 3 ಮತ್ತು 4 ನಾಟಿ ಮಾಡಿ ಬೆಳೆಸಿರುತ್ತಾರೆ ಎಂರೆ ಸರಿಯಲ್ಲ. ದಾವಾ ಆಸ್ತಿ ಯಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಮಾಲಿಕತ್ವಕ್ಕೆ ಮುಂಚೆಯಿಂದಲೂ ಜಗಳ

ನಡೆಯುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೆನೆ ಎನ್ನುತ್ತಾರೆ. ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ದಾವಾ ಆಸ್ತಿ ನಿಮ್ಮದಲ್ಲ ನಿವು ಸ್ವಾಧಿನದಲ್ಲಿ ಇಲ್ಲ ಎಂದರೆ ತಿಳಿದುಕೊಂಡಿರುತ್ತೆನೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಅವರ ಮುತ್ತಾತನ ಕಾಲದಿಂದ ಸ್ವಾಧಿನದಲ್ಲಿ ಇರುತ್ತಾರೆ ಸದರಿ ಆಸ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂರೆ ಸರಿಯಲ್ಲ, ದಾವಾ ಆಸ್ತಿಗೂ ನೀವು ಸಲ್ಲಿಸಿರುವ ಚಾಯಾ ಚಿತ್ರಕೂ ಸಂಬಂದ ಇಲ್ಲ ಬೆರೇಯವರ ತೋಟದ ಮರಗಳ ಮುಂದೆ ನಿಂತು ತೆಗೆದಿರುವ ಚಿತ್ರವನ್ನು ನೀವು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮರಗಳು **60** ವರ್ಷ ಹಳೆಯದಾದ ಮರಗಳು ಎಂದರೆ ಸುಳ್ಳು ಎನ್ನುತ್ತಾರೆ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.